ದಿಃ ***27.10.2018*** ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀಮತಿ ಎಸ್ ಎಸ್ 7 ನೇ ಎದುರುದಾರರ ಪರ ವಕೀಲರಿಂದ

ನಾನು ಶಿಕ್ಷಕಿಯಾಗಿರುವ ಕಾರಣ ಶಿವಮೊಗ್ಗದಲ್ಲಿ ವಾಸ ಇದ್ದೇನೆ. ಈ ಪ್ರಕರಣದಲ್ಲಿ ನಾನು ತಕರಾರು ಸಲ್ಲಿಸಿಲ್ಲ. ಅರ್ಜಿ ಅನುಸೂಚಿ ಆಸ್ತಿಗಳು ನನ್ನ ಮಾವ ಆನೆಪ್ಪ ರವರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ . 1 ನೇ ಎದುರುದಾರರ ಗಂಡ ಮಂಜುನಾಥರವರು ಈ ಹಿಂದೆ ಸಲ್ಲಿಸಿದ ಅಸಲು ದಾವೆ ಸಂಖ್ಯೆ 65/89 ರ ಬಗ್ಗೆ ನನಗೆ ಮಾಹಿತಿ ಇಲ್ಲ. 1994 ರಲ್ಲಿ ನನ್ನ ಮದುವೆ ಆಗಿದೆ. ಅದಕ್ಕಿಂತ ಮೊದಲಿನ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ. 1994 ರ ನಂತರದ ವಿಚಾರಗಳ ಬಗ್ಗೆ ಮಾಹಿತಿ ಇದೆ. ಅಸಲು ದಾವೆ ಸಂಖ್ಯೆ 65/89 ಡಿಕ್ರಿಯಾಗಿದೆ ಎಂದರೆ ಸರಿ . ನನ್ನ ಮದುವೆಯಾದಾಗ ಸುಕನ್ಯಾರವರ ಮದುವೆ ಆಗಿರಲಿಲ್ಲ ಎಂದರೆ ಸರಿ . ಸುಕನ್ಯಾರವರ ಮದುವೆ 15.05.1996 ರಲ್ಲಿ ಆಗಿತ್ತು ಎಂದರೆ ಸರಿ . ನನ್ನ ಅತ್ತೆ ಸಿದ್ದಮ್ಮ ರವರು 2014 ರಲ್ಲಿ ತೀರಿ ಹೋಗಿದ್ದಾರೆ. ನನ್ನ ಅತ್ತೆ ಸಿದ್ದಮ್ಮರವರು ಸುಕನ್ಯಾರವರ ಮನೆ ಯಲ್ಲಿ ಮೃತಪಟ್ಟಿದ್ದರು ಎಂದರೆ ಸರಿಯಲ್ಲ. ನಮ್ಮ ಮನೆ ಚೆನ್ನಗಿರಿಯಲ್ಲಿ ಮೃತಪಟ್ಟಿದ್ದರು. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದಮ್ಮ 15 ವರ್ಷಗಳಿಂದ ಸುಕನ್ಯಾರವರ ಮನೆಯಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. ಸುಕನ್ಯಾರವರು ಈ ಕೇಸಿನಲ್ಲಿ ಏನೇನು ದಾಖಲೆಗಳನ್ನು ಸಲ್ಲಿಸಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಿ ಆರ್ 1 ಸಿದ್ದಮ್ಮನವರ ಮರಣ ಪ್ರಮಾಣ ಪತ್ರದಲ್ಲಿ ಮರಣ ಸಮಯದ ವಿಳಾಸ ವಿವೇಕಾನಂದ ಬಡಾವಣೆ ದಾವಣಗೆರೆ ಎಂದು ಕಾಣಿಸಿದ್ದಾರೆ ಎಂದರೆ ವಿಳಾಸ ಇದೆ ಆದರೆ ಅದೆಲ್ಲಾ ಸುಳ್ಳು ಎಂದು ನುಡಿಯುತ್ತಾರೆ. ಸಿದ್ದಮ್ಮನವರು ಚೆನ್ನಗಿರಿಯಲ್ಲಿ ಮರಣ ಹೊಂದಿದ್ದಾರೆ ಎಂಬ ಬಗ್ಗೆ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡುತ್ತೇನೆ. ಸಿದ್ದಮ್ಮನವರು ತಮ್ಮ ಜೀವಿತ ಕಾಲದಲ್ಲಿ ಸುಕನ್ಯಾ ರವರ

ಹೆಸರಿಗೆ ಮರಣಶಾಸನ ಬರೆದ ಬಗ್ಗೆ ಮಾಹಿತಿ ಇದೆಯಾ ಎಂದರೆ ಇಲ್ಲ ಅದು ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ. ಸಿದ್ದಮ್ಮ ದಿಃ 01.08.2012 ರಂದು ಸುಕನ್ಯಾ ರವರ ಹೆಸರಿಗೆ ಮರಣ ಶಾಸನ ಬರೆದಿದ್ದಾರೆ ಎಂದರೆ ಅದು ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ. ಸಿದ್ದಮ್ಮನವರು ತಮಗೆ ಬರಬೇಕಾದ ಹಿಸ್ಸೆ ಪೂರ್ತಿ ಸುಕನ್ಯಾರವರಿಗೆ ಸೇರಬೇಕು ಎಂದು ಮರಣ ಶಾಸನ ಬರೆದಿದ್ದಾರೆ ಎಂದರೆ ಅದು ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ. ಮರಣ ಶಾಸನದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಕೂಡಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿದಂತಹ 3 ಆಸ್ತಿಗಳೂ ಸಿದ್ದಮ್ಮ ಹೆಸರಿನಲ್ಲಿದ್ದ ಆಸ್ತಿಗಳು ಎಂದರೆ ಸರಿ. ಪಂಚಾಯತಿ ಅಕ್ಟೋಬರ್ 2014 ರಲ್ಲಿ ನಡೆದಿತ್ತು . ಸದರಿ ಪಂಚಾಯತಿಯಲ್ಲಿ ಶಾರದ , ಮಮಿತ್ರ , ಮಂಜು, ನಾನು , ರಮೇಶ ಇದ್ದೆವು. ಸದರಿ ಪಂಚಾಯತಿಯಲ್ಲಿ ಬಿಳಿ ಹಾಳೆಯಲ್ಲಿ ಬರವಣಿಗೆಯಾಗಿತ್ತು . ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಈ ಪ್ರಕರಣ ನ್ಯಾಯಾಲಯದಲ್ಲಿ ಇದೆ ಎಂದು ಗೊತ್ತಿದ್ದರೂ ಕೂಡಾ ಸಿದ್ದಮ್ಮನವರ ಮರಣಾ ನಂತರ ಅವರ ಹೆಸರಿನಲ್ಲಿ ಆಸ್ತಿಯ ಬಗ್ಗೆ ನಾನು, ರಮೇಶ, ಸುಮಿತ್ರಾ ನಮ್ಮ ಹೆಸರಿಗೆ ಫೌತಿ ಖಾತೆ ಮಾಡಿಕೊಂಡಿದ್ದೆವು ಎಂದರೆ ಸರಿ . ಖಾತೆ ಬದಲಾವಣೆ ಬಗ್ಗೆ ಸಿದ್ದಮ್ಮನವರ ಇತರ ವಾರಸುದಾರರ ಒಪಿಗೆಯನ್ನು ನಾವು ಪಡೆದುಕೊಂಡಿದ್ದೇವೆ ಆ ಬಗ್ಗೆ ಚಾಪಾ ಕಾಗದದಲ್ಲಿ ಮಾಡಿಕೊಂಡ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ಸಿದ್ದಮ್ಮನವರ ಹೇಸರಿನಲ್ಲಿರುವ ಆಸ್ತಿಗಳ ಖಾತೆಯನ್ನು ಬೇರೆಯವರ ಹೆಸರಿಗೆ ಮಾಡಬಾರದು ಎಂದು ಸುಕನ್ಯಾ ಸಂಬಂಧಪಟ್ಟ ಇಲಾಖೆಗೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿ . ಸಾಕ್ಷಿಗೆ ಸದರಿ ಅರ್ಜಿಗಳ ದೃಢೀಕೃತ ನಕಲುಗಳನ್ನು ತೋರಿಸಿದಾಗ ಅವುಗಳನ್ನು ನೋಡಿ ಗುರುತಿಸಿರುತ್ತಾರೆ ಕಾರಣ ಸದರಿ ದಾಖಲೆಗಳನ್ನು ನಿ ಆರ್ 4 ಮತ್ತು 5 ಎಂದು ಗುರುತಿಸಲಾಗಿದೆ. ನಾನು ಶಿಕ್ಷಕಿಯಾದ ಕಾರಣ ನ್ಯಾಯಾಲಯದಲ್ಲಿ

ಪ್ರಕರಣದಲ್ಲಿರುವಾಗ ಖಾತೆ ಬದಲಾವಣೆ ಮಾಡಬಾರದು ಎಂಬ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ಸುಕನ್ಯಾರವರು ತಕರಾರು ಅರ್ಜಿಗಳನ್ನು ಸಲ್ಲಿಸಿದ್ದರೂ ಕೂಡಾ ನಾನು ಮತ್ತು ರಮೇಶ ಹಣ ಬಲದಿಂದ ಮತ್ತು ರಾಜಕೀಯ ಒತ್ತಡದಿಂದ ನಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಅರ್ಜಿ ಅನುಸೂಚಿ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಆದ ಕಾರಣ ಅವುಗಳಲ್ಲಿ ಸುಕನ್ಯಾರವರಿಗೆ ಸಮ ಭಾಗ ಇದೆ ಎಂದರೆ ನನಗೆ ಗೊತ್ತಿಲ್ಲ.

ಈ ಹಿಂದೆ ನಾನು ಸುಕನ್ಯಾ ಮತ್ತು ಅವರ ಗಂಡನ ವಿರುದ್ಧ ವರದಕ್ಷಿಣೆ ಕಿರುಕುಳ ಪ್ರಕರಣ ದಾಖಲಿಸಿದ್ದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಅವರಿಬ್ಬರು ಬಿಡುಗಡೆಯಾಗಿದ್ದಾರೆ ಎಂದರೆ ಸರಿ. ಅಂದಿನಿಂದ ಇಂದಿನವರೆಗೂ ನನಗೂ ಸಕನ್ಯಾರವರಿಗೂ ಮಾತುಕತೆ ಇಲ್ಲ ಎಂದರೆ ಸರಿ. ನಾನು, ರಮೇಶ ,ಶಾರದಾ, ಸುಮಿತ್ರಾರವರು ಸೇರಿಕೊಂಡು ಸುಕನ್ಯಾರವರಿಗೆ ದಾವಾ ಆಸ್ತಿಗಳಲ್ಲಿ ಭಾಗ ಸಿಗಬಾರದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ 27.10.2018 ರಂದು ಬೆರಳಚ್ಚು ಮಾಡಲಾಯಿತು)***

*ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು-ಎಎಂಎಸಿಟಿ-11,*
*ಭದ್ರಾವತಿ.*